
ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-8, ಸಂಚಿಕೆ-4 ತ್ರೈಮಾಸಿಕ ಅಕ್ಟೋಬರ್-ಡಿಸೆಂಬರ್ 2021 ಪುಟಗಳು-12



ಬೆವಿಕಂ
BESCOM

# ಕರ್ನಾಟಕ ಇ-ಮೊಬಿಲಿಟಿ ಕಾರ್ಯಾಗಾರ

## ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ
## ಶ್ರೀ ವಿ ಸುನಿಲ್ ಕುಮಾರ್ ರವರಿಂದ ಉದ್ಘಾಟನೆ












ಆತ್ಮೀಯ ಸಹೋದ್ಯೋಗಿ ಬಂಧುಗಳೆ,

ಕೋವಿಡ್ ಸಾಂಕ್ರಾಮಿಕವನ್ನು ತಡೆಗಟ್ಟುವಲ್ಲಿ ಕಳೆದ ಹಲವು ತಿಂಗಳುಗಳಿಂದ ಶಕ್ತಿಮೀರಿ ಪ್ರಯತ್ನ ಮುಂದುವರಿಸಿರುವ ಸಿಬ್ಬಂದಿ ಮತ್ತು ಅಧಿಕಾರಿ ವರ್ಗದವರ ಕಾರ್ಯ ಶ್ಲಾಘನೀಯವಾಗಿದೆ. ಈ ಸಂದರ್ಭದಲ್ಲಿ ತಾವೆಲ್ಲರೂ ತಮ್ಮ ಸುರಕ್ಷತೆಗಾಗಿ ಮುನ್ನೆಚ್ಚರಿಕೆ ಕ್ರಮಗಳಾದ ಮಾಸ್ಕ್ ಧರಿಸುವುದು, ಆಗಾಗ್ಗೆ ಕೈ ತೊಳೆಯುವುದು ಇವೇ ಮುಂತಾದ ಕ್ರಮಗಳನ್ನು ಅನುಸರಿಸಲು ಮರೆಯದಿರಿ.

ಬೆಂಗಳೂರು ನಗರದಲ್ಲಿ ಪ್ರಕೃತಿ ವಿಕೋಪದಿಂದ ಪ್ರಮುಖ ವಿದ್ಯುತ್ ಲೈನ್‌ಗೆ ಆಗುತ್ತಿದ್ದ ಹಾನಿಯನ್ನು ತಪ್ಪಿಸಲು ಬೆಸ್ಕಾಂ ಈಗಾಗಲೇ ಭೂಗತ ಕೇಬಲ್‌ಗಳನ್ನು ಅಳವಡಿಸುವ ಕಾರ್ಯ ಮುಂದುವರಿಸಿದೆ. ಸುಮಾರು 5182 ಕಿ.ಮೀ.ಗಳಷ್ಟು ಈ ಕೇಬಲ್‌ಗಳನ್ನು ಅಳವಡಿಸಲಾಗಿದೆ.

ಈ ಕೆಲಸಕ್ಕಾಗಿ ನಿಯೋಜಿಸಿರುವ ಏಜೆನ್ಸಿಗಳು ಬದ್ಧತೆ ಹಾಗೂ ಶ್ರಮದಿಂದ ಕಾರ್ಯ ನಿರ್ವಹಿಸಿದ ಪರಿಣಾಮ ಪ್ರಕೃತಿ ವಿಕೋಪದಿಂದ ಆಗಾಗ್ಗೆ ಉಂಟಾಗುತ್ತಿದ್ದ ವಿದ್ಯುತ್ ಸರಬರಾಜಿನಲ್ಲಿನ ವ್ಯತ್ಯಯವನ್ನು ತಡೆಯಲು ಸಹಕಾರಿಯಾಗಿದೆ.

ಬೆಸ್ಕಾಂ ಕೈಗೆತ್ತಿಕೊಂಡಿರುವ ಜನಸ್ನೇಹಿ ವಿದ್ಯುತ್ ಸೇವೆಗಳು ಐದು ವಿಧದಲ್ಲಿ ಗ್ರಾಹಕರಿಗೆ 24 ಗಂಟೆಗಳೊಳಗೇ ತಲುಪುತ್ತಿವೆ. ಹೊಸ ಬಗೆಯ ಸೇವೆಗಳಿಗೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದ್ದು ಹೊಸ ವಿದ್ಯುತ್ ಸಂಪರ್ಕಕ್ಕೆ ಈ ಸೇವೆ ಅಡಿಯಲ್ಲಿ ಅರ್ಜಿ ಸಲ್ಲಿಸಬಹುದು. ಇದರಿಂದ ಗ್ರಾಹಕರು ಹೆಚ್ಚು ದಿನ ಕಾಯುವಿಕೆ ತಪ್ಪಿ ವಿದ್ಯುತ್ ಸಂಬಂಧಿತ ಸಮಸ್ಯೆಗೆ ಪರಿಹಾರವೂ ದೊರೆತಂತಾಗಿದೆ. ವೆಬ್‌ಸೈಟ್ ಮತ್ತು ಆ್ಯಪ್‌ಗಳ ಮೂಲಕ ನೀಡುತ್ತಿರುವ ಆನ್‌ಲೈನ್ ಸೇವೆಗಳು ಕೂಡ ವಿದ್ಯುತ್ ಗ್ರಾಹಕರಿಗೆ ಬಿಲ್ ಪಾವತಿ ಸೇರಿದಂತೆ ಇತರೆ ವಿಚಾರಗಳಿಗೆ ಅನುಕೂಲವಾಗಿವೆ.

ಈ ಮೂಲಕ ಬೆಸ್ಕಾಂನ ಎಂಟು ಜಿಲ್ಲೆಗಳ ಗ್ರಾಹಕರಿಗೆ ಸುರಕ್ಷಿತ ಸೇವೆ ಒದಗಿಸಲಾಗಿದೆ. ಇದಕ್ಕಾಗಿ ಹಗಲು ರಾತ್ರಿ ಕಾರ್ಯ ನಿರ್ವಹಿಸಿ ಶ್ರಮಿಸುತ್ತಿರುವ ನಮ್ಮ ನೌಕರರು ಗ್ರಾಹಕರ ಹಿತರಕ್ಷಣೆಯಲ್ಲಿ ಸದಾ ಮುಂದೆ ಇರಬೇಕೆಂಬುದು ನನ್ನ ಆಶಯ.

ಹಾಳಾಗಿರುವ ವಿದ್ಯುತ್ ಪರಿವರ್ತಕಗಳನ್ನು ಶೀಘ್ರವಾಗಿ ಬದಲಾಯಿಸಿ ದುರಸ್ತಿ ಮಾಡಲು ಅನುಕೂಲವಾಗುವಂತೆ ಬೆಸ್ಕಾಂ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಲ್ಲಿ **'ಪರಿವರ್ತಕಗಳ ದುರಸ್ತಿ ಕೇಂದ್ರ'**ಗಳನ್ನು ಸ್ಥಾಪಿಸಲಾಗಿದೆ. ಇದರಿಂದ ಗ್ರಾಹಕರಿಗೆ 24 ಗಂಟೆಗಳೊಳಗೆ ಪರಿವರ್ತಕಗಳನ್ನು ಬದಲಿಸಿ ಸುಗಮ ವಿದ್ಯುತ್ ಸರಬರಾಜಿಗೆ ಅನುಕೂಲವಾಗಲಿದೆ.

ಗಂಗಾ-ಕಲ್ಯಾಣ ಯೋಜನೆ ಅಡಿಯಲ್ಲಿ ಬರುವ ರೈತರ ಪಂಪ್‌ಸೆಟ್‌ಗಳಿಗೆ ಒಂದು ತಿಂಗಳ ಒಳಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವುದು ಬೆಸ್ಕಾಂ ಸಂಸ್ಥೆಯ ಹೆಮ್ಮೆಯ ವಿಚಾರವಾಗಿದೆ. ಈ ಯೋಜನೆ ಅಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆದಿರುವ ರೈತರೆಲ್ಲರೂ ಹಿಂದುಳಿದ ವರ್ಗದವರಾಗಿರುವುದು ಗಮನಾರ್ಹ ಸಂಗತಿಯಾಗಿದೆ.

ತಮಗೆಲ್ಲರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು. ನಿಮ್ಮ ಸೇವೆ ಗ್ರಾಹಕರ ಹಿತದೃಷ್ಟಿಯಿಂದ ಹೀಗೆ ಮುಂದುವರಿಯಲಿ ಎಂದು ಆಶಿಸುತ್ತೇನೆ.

**ಪಿ.ರಾಜೇಂದ್ರ ಚೋಳನ್**
ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ

## ಸಂಪಾದಕೀಯ



ಆತ್ಮೀಯರೇ,

ಸಾಮಾನ್ಯವಾಗಿ ಅಕ್ಟೋಬರ್ ನಂತರದ ತಿಂಗಳುಗಳೆಂದರೆ, ಮುಂಗಾರು ಮಳೆ ಬಿಡುವು ಕೊಟ್ಟು ಚಳಿಗಾಲದ ವಾತಾವರಣವಿರುವ ಸಮಯ.

ಆದರೆ ಈ ಬಾರಿ ನವೆಂಬರ್ ತಿಂಗಳಿನಲ್ಲಿಯೂ ಭರಪೂರ ಮಳೆ. ದೀಪಾವಳಿ ಕಳೆದರೂ ನಿಲ್ಲದ ಮಳೆಯ ವಾತಾವರಣ ಜನರಲ್ಲಿ ಆತಂಕವನ್ನೇ ನಿರ್ಮಾಣ ಮಾಡಿತ್ತು.

ಅತಿವೃಷ್ಟಿಯಿಂದ ರಾಜ್ಯದ ಎಲ್ಲ ಜಲಾಶಯಗಳೂ ಭರ್ತಿಯಾಗಿರುವುದು ಸಮಾಧಾನಕರ ಸಂಗತಿಯಾಗಿದೆ. ಇದರಿಂದ ಜಲವಿದ್ಯುತ್ ಘಟಕಗಳಲ್ಲಿ ವಿದ್ಯುತ್ ಉತ್ಪಾದನೆ ಸುಧಾರಣೆಯಾಗಲು ನೆರವಾಗಿದೆ.

"ಬೆಸ್ಕಾಂ" ವ್ಯಾಪ್ತಿಯ ಜಿಲ್ಲೆಗಳಲ್ಲಿ ಮಳೆಯಿಂದ ವಿದ್ಯುತ್ ಸರಬರಾಜಿನ ಮೇಲೆ ಹೆಚ್ಚಿನ ಪ್ರತಿಕೂಲ ಪರಿಣಾಮ ಆಗಿಲ್ಲ. ಆದರೂ ಬೆಂಗಳೂರಿನಲ್ಲಿ ಕೆಲವೆಡೆ ಮರಗಳು ಹಾಗೂ ಕೊಂಬೆಗಳು ವಿದ್ಯುತ್ ಕಂಬಗಳು ಹಾಗೂ ತಂತಿ ಮೇಲೆ ಬಿದ್ದು ವಿದ್ಯುತ್ ಸರಬರಾಜು ವ್ಯತ್ಯಯಗೊಂಡ ಸಂದರ್ಭಗಳಲ್ಲಿ "ಬೆಸ್ಕಾಂ" ಸಿಬ್ಬಂದಿ ಮತ್ತು ಅಧಿಕಾರಿಗಳು ಸಕಾಲದಲ್ಲಿ ವ್ಯತ್ಯಯವನ್ನು ಸರಿಪಡಿಸಿ ಬಳಕೆದಾರರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸಿರುವುದು ಅಭಿನಂದನಾರ್ಹವಾಗಿದೆ.

ಗ್ರಾಹಕರಿಗೆ ನಿರಂತರ ವಿದ್ಯುತ್ ಸರಬರಾಜು ಮಾಡಲು ನಾವು ಸದಾಕಾಲ ಸನ್ನದ್ಧರಾಗಿರಬೇಕು.

ಗ್ರಾಹಕರ ದೂರುಗಳನ್ನು ಆಧರಿಸಿ ಸಮಸ್ಯೆಗಳಿಗೆ ಸೂಕ್ತಪರಿಹಾರ ದೊರಕಿಸುವುದು ನಮ್ಮ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಎಲ್ಲರೂ ಕಾರ್ಯೋನ್ಮುಖರಾಗಬೇಕೆಂಬುದು ನನ್ನ ಮನವಿ.

ತಮ್ಮೆಲ್ಲರಿಗೂ ಹೊಸ ವರ್ಷದ ಶುಭಾಶಯಗಳನ್ನು ಕೋರುತ್ತೇನೆ.

**ಬಿ.ಆರ್.ಸೋಮಶೇಖರ್**
ಪ್ರಧಾನ ವ್ಯವಸ್ಥಾಪಕರು (ಗ್ರಾಸಂ), ಬೆವಿಕಂ



ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಪ್ರಮುಖವಾಗಿದ್ದ ದಕ್ಷಿಣ ಕನ್ನಡವನ್ನು 1997ರಲ್ಲಿ ವಿಭಜಿಸಿ ಉಡುಪಿಯನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಲಾಯಿತು. ಆದರೂ ಹಲವು ವಿಶೇಷಗಳನ್ನು ತನ್ನ ಒಡಲಿನಲ್ಲಿ ಇರಿಸಿಕೊಂಡಿರುವ ಕಡಲ ತಡಿಯ ಈ ಜಿಲ್ಲೆ ಪ್ರಮುಖ ಸ್ಥಾನವನ್ನು ಉಳಿಸಿಕೊಂಡಿದೆ.

**ಪರಶುರಾಮ ಕ್ಷೇತ್ರ** ಎಂದೇ ಹೆಸರಾಗಿರುವ ದಕ್ಷಿಣ ಕನ್ನಡ ಸಮುದ್ರ ತೀರ ಹಾಗೂ ಸಹ್ಯಾದ್ರಿ ಪರ್ವತ ಶ್ರೇಣಿಯ ಮಲೆನಾಡಿನ ಭಾಗಗಳನ್ನು ಹೊಂದಿದೆ.

ಈ ಜಿಲ್ಲೆಯಲ್ಲಿರುವಷ್ಟು ದೇವಾಲಯಗಳು, ಮಸೀದಿ, ಚರ್ಚ್‌ಗಳು ಮತ್ತು ಜೈನ ಬಸದಿಗಳು ಬೇರೆಡೆ ಇರಲಾರವು. ಅದ್ವೈತ ಮತ್ತು ದ್ವೈತ ಸಿದ್ಧಾಂತಗಳನ್ನು ಮೊಟ್ಟ ಮೊದಲಿಗೆ, ಬೇರೆ ಬೇರೆ ಕಾಲಗಳಲ್ಲಿ ಇಲ್ಲಿಯೇ ಪ್ರತಿಪಾದಿಸಲಾಯಿತು. ಪರಧರ್ಮ ಸಹಿಷ್ಣುತೆಯ ಸಂದೇಶವನ್ನು ಇಲ್ಲಿಯ ನೆಲ ಬಹಳ ಚೆನ್ನಾಗಿ ಪ್ರತಿಬಿಂಬಿಸಿದೆ. ಕ್ರೈಸ್ತಧರ್ಮ ಮೊದಲು ದೇಶಕ್ಕೆ ಕಾಲಿರಿಸಿದ್ದು ಪಶ್ಚಿಮ ಕರಾವಳಿಯ ಮೂಲಕವೇ. ಇಲ್ಲಿಯ ಕೆಲವು ಚರ್ಚ್‌ಗಳು ಶತಮಾನದ ಹಿನ್ನೆಲೆಯನ್ನು ಹೊಂದಿವೆ.

ಪ್ರತ್ಯೇಕ ಜಿಲ್ಲೆಯಾದಾಗ ಆರಂಭದಲ್ಲಿ ಮಂಗಳೂರು, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ ಹಾಗೂ ಸುಳ್ಯ ಸೇರಿ ಐದು ತಾಲ್ಲೂಕುಗಳಿದ್ದವು. ಇತ್ತೀಚೆಗೆ ಕಡಬ ಮತ್ತು ಮೂಡಬಿದರೆಗಳನ್ನು ಸೇರಿಸಿ ಒಟ್ಟು ಏಳು ತಾಲ್ಲೂಕುಗಳನ್ನು ಮಾಡಲಾಗಿದೆ.

ಈ ಜಿಲ್ಲೆಯ ಜನಸಂಖ್ಯೆ ಅಂದಾಜು 21 ಲಕ್ಷ ಇದೆ. ನೇತ್ರಾವತಿ, ಗುರುಪುರ ಸೇರಿದಂತೆ ಹಲವು ಪ್ರಮುಖ ನದಿಗಳು ಇಲ್ಲಿ ಹರಿಯುತ್ತವೆ. ಭತ್ತ, ತೆಂಗು, ಅಡಿಕೆ ಪ್ರಮುಖ ಬೆಳೆಗಳು. ಜಿಲ್ಲಾ ಕೇಂದ್ರವಾದ ಮಂಗಳೂರಿನ ಪ್ರಮುಖ ದೇವತೆ ಮಂಗಳಾದೇವಿ. ಈ ದೇವಿಯಿಂದಲೇ ಮಂಗಳೂರು ಎಂಬ ಹೆಸರು ಬಂತೆಂಬುದು ಪುರಾಣ ಪ್ರತೀತಿ. ವಾಣಿಜ್ಯ ಸರಕು-ಸಾಗಣೆ ವಹಿವಾಟಿಗೆ ಹೆಸರಾಗಿರುವ ನವಮಂಗಳೂರು ಬಂದರು ದೇಶದ ಪ್ರಮುಖ ಬಂದರಾಗಿದೆ. ಹಂಪನಕಟ್ಟೆಯಿಂದ 10 ಕಿ.ಮೀ. ದೂರದಲ್ಲಿದೆ.

**ಕುದ್ರೋಳಿ ಗೋಕರ್ಣನಾಥ ದೇವಾಲಯ**: ಮಂಗಳೂರಿನಲ್ಲಿ ಅನೇಕ ದೇವಾಲಯಗಳಿದ್ದರೂ ಕುದ್ರೋಳಿಯ ಈ ದೇವಾಲಯ ಬೇರೆ ದೇವಸ್ಥಾನಗಳಿಗಿಂತ ಭಿನ್ನವಾಗಿದೆ. ಇಲ್ಲಿಯ ಸ್ಥಳ ಪುರಾಣದಂತೆ ಇದು ಬಿಲ್ಲವ ಸಮುದಾಯಕ್ಕೆ ಸೇರಿದ ದೇವಾಲಯ. ಸಮಾಜ ಸುಧಾರಕ ಬ್ರಹ್ಮಶ್ರೀ ನಾರಾಯಣ ಗುರುಗಳು 1912 ರಲ್ಲಿ ಅವರೇ ತಂದ ಶಿವಲಿಂಗವನ್ನು ಪ್ರತಿಷ್ಠಾಪಿಸಿ 'ಗೋಕರ್ಣನಾಥ" ಎಂದು ನಾಮಕರಣ ಮಾಡಿದರು. ನಂತರದ ವರ್ಷಗಳಲ್ಲಿ ಸುಮಾರು ಮೂರು ಎಕರೆ ಜಾಗದಲ್ಲಿ ಅತ್ಯಾಧುನಿಕ ರೀತಿಯಲ್ಲಿ ಈ ದೇವಾಲಯವನ್ನು ನವೀಕರಿಸಲಾಯಿತು. ದ್ರಾವಿಡ ಶೈಲಿಯಲ್ಲಿ ಸುಂದರವಾದ ರಾಜಗೋಪುರವನ್ನು ನಿರ್ಮಿಸಲಾಗಿದೆ 18 ಮೀಟರು ಎತ್ತರವಿರುವ ಈ ಗೋಪುರಕ್ಕೆ ಮಹಾಬಲಿಪುರದಿಂದ ಮೂರ್ತಿಗಳನ್ನು ತಂದು ಅಲಂಕರಿಸಲಾಗಿದೆ. ಮುಂಭಾಗದಲ್ಲಿ ಬೃಹದಾಕಾರದ ಸಿಮೆಂಟಿನ ಎರಡು ಆನೆಗಳು ಭಕ್ತರನ್ನು ಸ್ವಾಗತಿಸುತ್ತವೆ. ಒಳಗೆ ಶಿವಪಾರ್ವತಿಯರು, ಗಣಪತಿ, ಷಣ್ಮುಖರೊಂದಿಗಿರುವ ದೇವಾಲಯದ ಶಿಖರವು



ಮನಮೋಹಕವಾಗಿದೆ. ನಾರಾಯಣ ಗುರುಗಳ ನೆನಪಿಗಾಗಿ ಮುಂಬೈನ ಬಿಲ್ಲವ ಸಮಾಜದವರು ನೀಡಿರುವ ಗುರುಗಳ ಅಮೃತ ಶಿಲೆಯ ಮೂರ್ತಿಯನ್ನು ಆವರಣದಲ್ಲಿ ಪ್ರತಿಷ್ಠಾಪಿಸಲಾಗಿದೆ. ಮುಂದೆ ಜಲಪಾತ ಮತ್ತು ಕೈಲಾಸ ಪರ್ವತದ ಮಾದರಿಗಳಿವೆ.

**ಶರವು ಮಹಾಗಣಪತಿ**: ಸುಮಾರು ಎಂಟು ನೂರು ವರ್ಷಗಳ ಇತಿಹಾಸವಿರುವ ಶರವು ಮಹಾಗಣಪತಿ ದೇವಾಲಯವು ಹಂಪನಕಟ್ಟೆಗೆ ಸಮೀಪದಲ್ಲಿಯೇ ಇದೆ. ಸೂರ್ಯ ವಂಶದ ವೀರಬಾಹು ಎಂಬ ಅರಸ ಈ ದೇವಾಲಯವನ್ನು ಕಟ್ಟಿಸಿದನೆಂದು ಪ್ರತೀತಿ.

**ಕದ್ರಿ ಮಂಜುನಾಥ**: ದಕ್ಷಿಣ ಕನ್ನಡದ ತೀರ್ಥಕ್ಷೇತ್ರಗಳಲ್ಲಿ ಒಂದಾದ ಈ ದೇವಾಲಯವು ನಗರದ ಸಮೀಪದಲ್ಲಿದೆ.



ಅನೇಕ ನಾಥಪಂಥದ ಯತಿಗಳಿಗೆ ಅರ್ಪಿತವಾಗಿರುವ ಯೋಗಿ ಮಠವೂ, ಬೆಟ್ಟದ ತುದಿಯಲ್ಲಿರುವ ಪ್ರಾಚೀನ ಗುಡಿ-ಗೋಪುರಗಳು ಮತ್ತು ಗುಹೆಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ.

**ಕಾರಿಂಜೆ ಶಿವಾಲಯ**: ಮಂಗಳೂರಿನಿಂದ 42 ಕಿ.ಮೀ. ದೂರದ ಕಾರಿಂಜೆ ಒಂದು ಚಿಕ್ಕ ಗ್ರಾಮ. ಬಂಟ್ವಾಳ ಸಮೀಪವಿರುವ ಇಲ್ಲಿನ ಶಿವಾಲಯ ಪ್ರಾಚೀನ ಕಾಲದ ದೇವಾಲಯ. ಎತ್ತರದ ಗುಡ್ಡದ ಮೇಲಿದ್ದು ಸುತ್ತಲಿನ ಪ್ರಕೃತಿ ಸೌಂದರ್ಯ ದೃಶ್ಯಗಳು ಮನಸೆಳೆಯುವಂತಿವೆ.

**ಕುಕ್ಕೆ ಸುಬ್ರಹ್ಮಣ್ಯ**: ಸುಳ್ಯಕ್ಕೆ ಸಮೀಪದ ಒಂದು ಪ್ರಸಿದ್ಧ ತೀರ್ಥಕ್ಷೇತ್ರ. ಕುಮಾರ ಪರ್ವತ ಮತ್ತು ಶೇಷ ಪರ್ವತ ಎಂಬ ಎರಡು ಬೆಟ್ಟಗಳ ನಡುವೆ ಇರುವ ಸುಂದರ ಪ್ರದೇಶವೇ ಕುಕ್ಕೆ. ಸ್ಕಂದ ಪುರಾಣದ ಪ್ರಕಾರ ಶಿವ ಮತ್ತು ಪಾರ್ವತಿಯರ ಮಗನಾಗಿ ಸುಬ್ರಹ್ಮಣ್ಯ ಪುಷ್ಪಗಿರಿಯ ಜನರಿಗೆ ತೊಂದರೆ ಕೊಡುತ್ತಿದ್ದ ತಾರಕಾಸುರನನ್ನು ಸಂಹಾರಮಾಡಿ ಕುಕ್ಕೆಯಲ್ಲಿಯೇ ನೆಲೆಸಿದನೆಂದು ಪ್ರತೀತಿ. ಸರ್ಪದೋಷದ ನಿವಾರಣೆಗೆ ಹರಕೆ ಹೊತ್ತ ನೂರಾರು ಭಕ್ತರು ನಿತ್ಯ ಇಲ್ಲಿಗೆ ಬರುವುದೇ ಇಲ್ಲಿನ ವಿಶೇಷ.



**ಧರ್ಮಸ್ಥಳ ಮಂಜುನಾಥಸ್ವಾಮಿ**: ಬೆಳ್ತಂಗಡಿ ಸಮೀಪದ ಪವಿತ್ರ ಯಾತ್ರಾಸ್ಥಳವೇ ಧರ್ಮಸ್ಥಳ. ಜನರ ಧಾರ್ಮಿಕ ಜೀವನದಲ್ಲಿ ಮಹತ್ತರ ಪಾತ್ರವಹಿಸಿರುವ ಇಲ್ಲಿಗೆ ಕರ್ನಾಟಕ ಮಾತ್ರವಲ್ಲದೆ ಆಂಧ್ರ, ತಮಿಳುನಾಡು, ಕೇರಳ ಮತ್ತಿತರ ಹೊರರಾಜ್ಯಗಳಿಂದಲೂ ಪ್ರತಿದಿನ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಇಲ್ಲಿಗೆ ಆಗಮಿಸುತ್ತಾರೆ.



ಈ ಕ್ಷೇತ್ರದ ಮುಖ್ಯಸ್ಥರು ಜೈನಧರ್ಮದವರು, ಶಿವಲಿಂಗದ ಅರ್ಚಕರು ಮಾಧ್ವಸಮಾಜದ ವೈಷ್ಣವರು ಎಂಬುದೇ ಇಲ್ಲಿನ ವೈಶಿಷ್ಯ. ಇಲ್ಲಿನ ಏಕಶಿಲಾ ವಿಗ್ರಹ ಗೊಮ್ಮಟಮೂರ್ತಿ ಹಾಗೂ 'ಮಂಜೂಷ" ಎಂಬ ವಿಶಿಷ್ಟ ವಸ್ತು ಸಂಗ್ರಹಾಲಗಳೂ ಪ್ರವಾಸಿಗರ ಆರ್ಕಷಣೀಯ ತಾಣವಾಗಿವೆ.

**ಪೊಳಲಿ ರಾಜರಾಜೇಶ್ವರಿ ದೇವಾಲಯ**: ಮಂಗಳೂರು-ಬೆಂಗಳೂರು ಹೆದ್ದಾರಿಗೆ ಸಮೀಪದ ಪೊಳಲಿ ಎಂಬ ಗ್ರಾಮದಲ್ಲಿ ರಾಜರಾಜೇಶ್ವರಿ ತಾಯಿಯ ದೇವಾಲಯವಿದೆ. ಬಂಟ್ವಾಳದಿಂದ 12 ಕಿ.ಮೀ. ದೂರದ ಗುರುಪುರ ನದಿಯ ಸಮೀಪವೇ ಇರುವ ಈ ದೇವಾಲಯವು 8ನೇ ಶತಮಾನದಲ್ಲಿ ನಿರ್ಮಾಣವಾಯಿತೆಂದು ಶಾಸನಗಳು ಹೇಳುತ್ತವೆ. ವಿಶಿಷ್ಟವಾದ ಮಣ್ಣಿನಿಂದ ದೇವಿಯ ಮೂರ್ತಿಯನ್ನು ಮಾಡಲಾಗಿದೆ. ಎಡ-ಬಲದಲ್ಲಿ ಸರಸ್ವತಿ, ಭದ್ರಕಾಳಿ, ಮಹಾಗಣಪತಿ ಮೊದಲಾದ ಪರಿವಾರ ದೇವತೆಗಳ ಮೃಣ್ಮಯ ಮೂರ್ತಿಗಳಿವೆ.

**ಬಪ್ಪನಾಡು-ದುರ್ಗಾಪರಮೇಶ್ವರಿ ನೆಲೆ**: ಮಂಗಳೂರಿನಿಂದ 30 ಕಿ.ಮೀ. ದೂರದಲ್ಲಿರುವ ಬಪ್ಪನಾಡು ದುರ್ಗಾ ಪರಮೇಶ್ವರಿ ದೇವಾಲಯವು ಶಕ್ತಿ ದೇವತೆಯ ಪೂಜೆಗೆ ಪ್ರಸಿದ್ಧವಾಗಿದೆ. ಕೇರಳದ ಪ್ರಸಿದ್ಧ ಮುಸಲ್ಮಾನ ಬಪ್ಪ ಬ್ಯಾರಿಯ ಭಕ್ತಿಗೆ ಮೆಚ್ಚಿ ಒಲಿದು ಬಂದ ತಾಯಿ ದುರ್ಗಾ ಪರಮೇಶ್ವರಿಯು ನೆಲೆನಿಂದ ತಾಣವೇ ಬಪ್ಪನಾಡು ಎಂದು ಪ್ರಸಿದ್ಧವಾಗಿದೆ. ಈ ಮುಸಲ್ಮಾನ ಬಪ್ಪಬ್ಯಾರಿಯೇ ದುರ್ಗೆಯ ಮಂದಿರವನ್ನು 16ನೇ ಶತಮಾನದಲ್ಲಿ ಕಟ್ಟಿಸಿದನೆಂದು ಐತಿಹ್ಯವಿದೆ. ಈ ದೇವಾಲಯ ಇಂದಿಗೂ ಹಿಂದು, ಮುಸಲ್ಮಾನ್ ಮತ್ತು ಜೈನ ಮತಗಳ ಅನುಯಾಯಿಗಳಿಗೆ ಆರಾಧನೆಯ ಸ್ಥಳವಾಗಿದೆ.

**ಮೂಡಬಿದರೆ ಸಾವಿರದ ಕಂಬದ ಬಸದಿ**: ಮಂಗಳೂರಿಗೆ 35 ಕಿ.ಮೀ ದೂರದಲ್ಲಿರುವ ಮೂಡಬಿದರೆ ಒಂದು ಸುಪ್ರಸಿದ್ಧ ಜೈನ ಕ್ಷೇತ್ರ. ಮೂಡಣ ದಿಕ್ಕಿನಲ್ಲಿರುವ ಈ ಊರು ಬಿದಿರು ಮೆಳೆಗಳಿಂದ ಕೂಡಿದ್ದುದರಿಂದ 'ಮೂಡಬಿದರೆ' ಎಂಬ ಹೆಸರು ಪಡೆಯಿತೆಂದು ಹೇಳಲಾಗಿದೆ. ಜೈನರ ವಾಸ್ತು ಕಲಾಮಂದಿರಗಳು, ಬಸದಿಗಳು ಮತ್ತು ದೇವಾಲಯ-ಗಳಿಂದ ಕೂಡಿದ ಮೂಡಬಿದರೆ ಬಹಳ ಪ್ರಸಿದ್ಧಿಯಾಗಿದೆ. ಈ ಗ್ರಾಮವು 17 ನೇಯ ಶತಮಾನದಲ್ಲಿ ಜೈನಮತಾ-ವಲಂಬಿಗಳಾಗಿದ್ದ ಚೌಟ ಅರಸರ ರಾಜಧಾನಿಯಾಗಿತ್ತು. ಮೂಡಬಿದರೆಯಲ್ಲಿ 18 ಬಸದಿಗಳಿವೆ. ಇವುಗಳಲ್ಲಿ ತ್ರಿಭುವನ ತಿಲಕ ಚೂಡಾಮಣಿ ಬಸದಿಯು ಅತ್ಯಂತ ಆಕರ್ಷಣೀಯವಾಗಿದ್ದು, ಈ ಬಸದಿಯಲ್ಲಿ ಒಂದು ಸಾವಿರ ಕಂಬಗಳಿವೆ ಎನ್ನಲಾಗಿದೆ. ಮೂರು ಅಂತಸ್ತುಗಳುಳ್ಳ ಈ ಬಸದಿಯಲ್ಲಿ ಆರು ಮಂಟಪಗಳಿದ್ದು ಗರ್ಭಗುಡಿಯಲ್ಲಿ ಮೂರು ಮೀಟರು ಎತ್ತರದ ಚಂದ್ರನಾಥಸ್ವಾಮಿ ವಿಗ್ರಹವಿದೆ. ಇದು ಪಂಚಲೋಹದ ಮೂರ್ತಿಯಾಗಿದೆ.

**ಕಟೀಲು ಕ್ಷೇತ್ರ** : ಮಂಗಳೂರಿಗೆ 25 ಕಿ.ಮೀ. ದೂರದಲ್ಲಿರುವ ಕಟೀಲು ದುರ್ಗಾ ಪರಮೇಶ್ವರಿ ದೇವಾಲಯವೂ ಒಂದು ಪವಿತ್ರ ಯಾತ್ರಾಸ್ಥಳ. ನಂದಿನಿ ನದಿಯ ಮಧ್ಯದಲ್ಲಿರುವ ಈ ದೇವಾಲಯ ನಿಸರ್ಗ ಸುಂದರವಾದ ಪರಿಸರವನ್ನು ಹೊಂದಿದೆ.

ಹಲವು ವೈಶಿಷ್ಟ್ಯಗಳಿಂದ ಕೂಡಿದ ದರ್ಗಾ ಹಾಗೂ ಚರ್ಚ್‌ಗಳೂ ಸಹ ಈ ಜಿಲ್ಲೆಯಲ್ಲಿ ಎಲ್ಲಾ ಧರ್ಮೀಯ ಭಕ್ತರನ್ನು ಆರ್ಕಷಿಸುತ್ತವೆ.

## ಸಾಧಕರು ಇವರು

# ನಾಲ್ವಡಿ ಕೃಷ್ಣರಾಜ ಒಡೆಯರ್

ಧೀಮಂತ ದೊರೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹುಜನರ ಬಂಧು. ಅವರ ಸೇವೆ ಮಾದರಿಯಾದುದು. ನವ ಮೈಸೂರಿನ ನಿರ್ಮಾತೃವಾಗಿದ್ದ ಅವರು ನಮ್ಮ ನಾಡಿನ ರಾಜರಲ್ಲಿ ವಿಶೇಷ ಸ್ಥಾನವನ್ನು ಹೊಂದಿದವರು.

ನಾಲ್ವಡಿ ಕೃಷ್ಣರಾಜರು ಮೈಸೂರು ಸಂಸ್ಥಾನದ ಒಡೆಯರ್ ರಾಜಸಂತತಿಯ 29 ನೇ ರಾಜರು. ಅವರ ಆಳ್ವಿಕೆ 1902 ರಿಂದ 1940 ರವರೆಗೆ ನಡೆಯಿತು. ಅವರು 1895 ರಲ್ಲಿ ಪಟ್ಟಾಭಿಷಿಕ್ತರಾದರೂ ಸಹ ಕೇವಲ 10 ವರ್ಷದ ಬಾಲಕರಾಗಿದ್ದುದರಿಂದ ಅವರ ತಾಯಿಯವರಾದ ಮಹಾರಾಣಿ ವಾಣಿವಿಲಾಸ ಅವರ ಉಸ್ತುವಾರಿಯಲ್ಲಿ ಆಡಳಿತ ನಿರ್ವಹಣೆ ಮಾಡಿದರು. ರಾಜಕುಮಾರನಿಗೆ ಸೂಕ್ತ ವಿದ್ಯಾಭ್ಯಾಸ, ಆಡಳಿತ ತರಬೇತಿ ಇವುಗಳನ್ನು ಮಹಾರಾಣಿಯವರು ತೀವ್ರ ನಿಗಾ ವಹಿಸಿ ನಡೆಸಿದುದರ ಪರಿಣಾಮವಾಗಿ ಮೈಸೂರು ರಾಜ್ಯಕ್ಕೆ ಒಬ್ಬ ಸಮರ್ಥ ಆಡಳಿತಗಾರರಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ದೊರಕಿದರು.



1902 ರ ಆಗಸ್ಟ್ 8ನೇ ತಾರೀಖಿನಿಂದ ಮೈಸೂರು ರಾಜ್ಯದ ನೇರ ಉಸ್ತುವಾರಿ ಕೃಷ್ಣರಾಜ ಒಡೆಯರ್‌ರ ಸುಪರ್ದಿಗೆ ಬಂದಿತು. ಆಗ ದಿವಾನರಾಗಿದ್ದ ಸರ್.ಕೆ.ಶೇಷಾದ್ರಿ ಅಯ್ಯರ್‌ರವರ ಸಹಕಾರದೊಡನೆ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ನಾಲ್ವಡಿ ಅವರು ಕಂಕಣಬದ್ಧರಾದರು. ಇವರ ಕಾಲದಲ್ಲಿ ಇಡೀ ದೇಶದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಮೈಸೂರು ರಾಜ್ಯವು ಕಂಡುದರಿಂದ, ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು. ಆದುದರಿಂದ ಅವರ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಹೆಸರಿಗೆ ಮಾತ್ರ ಇದ್ದ 'ಪ್ರಜಾ ಪ್ರತಿನಿಧಿ ಸಭೆ' ನೂತನ ರೂಪವನ್ನು ಪಡೆದು, ನಿಜವಾದ 'ಪ್ರಜಾ ಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು. ಅದಕ್ಕಾಗಿ 1923 ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು, ಪ್ರಜಾ ಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. "ಈ ಸಭೆಯ 275 ಸದಸ್ಯರಲ್ಲಿ ಹೆಚ್ಚಿನವರು ಜನರಿಂದ ಆಯ್ಕೆಯಾದವರಾಗಿದ್ದರು.

ಇದರ ಜೊತೆಗೆ 1907 ರಲ್ಲಿ 'ನ್ಯಾಯ ವಿಧಾಯಕ' ಸಭೆಯನ್ನೂ ಸಹ ಸ್ಥಾಪಿಸಲಾಯಿತು. ಇದರ ಸದಸ್ಯರ ಸಂಖ್ಯೆ 50. ಇದರಲ್ಲಿ ಜನರಿಂದ ಆಯ್ಕೆಯಾದವರು 22 ಸದಸ್ಯರು. ಮೇಲ್ಮನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಸಂಸ್ಥೆ, ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿತ್ತು. ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲಾ ವಿಷಯಗಳನ್ನೂ ಸಹ ವಿಮರ್ಶಿಸುವ ಅಧಿಕಾರ ಆ ಸಭೆಗೆ ಇದ್ದಿತು. ಮುಖ್ಯವಾಗಿ ಯಾವುದೇ ಕಾನೂನನ್ನು ಜಾರಿಗೊಳಿಸಲು ಆ ಸಭೆಯ ಅನುಮತಿ ಅಗತ್ಯವಾಗಿತ್ತು. ಆ ಸಭೆಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತು.

ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯಕ್ಕೆ ನೀಡಿದ ಅಮೂಲ್ಯ ಕೊಡುಗೆ ಎಂದರೆ, ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟಿದ್ದುದು. ರಾಜ್ಯದ ಸಣ್ಣ ಸಣ್ಣ ಪಟ್ಟಣಗಳಲ್ಲಿಯೂ ಸಹ ಮುನಿಸಿಪಾಲಿಟಿಗಳು ರಚನೆಯಾದವು. ಹಳ್ಳಿಗಳಲ್ಲಿ ಪ್ರಥಮ ಬಾರಿಗೆ ಗ್ರಾಮ ಪಂಚಾಯಿತಿಗಳು ಕಾರ್ಯ ನಿರ್ವಹಿಸಲು ಆರಂಭ ಮಾಡಿದುದರಿಂದ, ಗ್ರಾಮೀಣ ಪ್ರದೇಶಗಳಲ್ಲಿ ಆಡಳಿತದಲ್ಲಿ ಜನರ ಭಾಗವಹಿಸುವಿಕೆಗೆ ಅಪಾರ ಉತ್ತೇಜನ ನೀಡಲಾಯಿತು. ಇವರ ಕಾಲದಲ್ಲಿ ಗ್ರಾಮ ನಿರ್ಮಲೀಕರಣ, ವೈದ್ಯಕೀಯ ಸಹಾಯ, ವಿದ್ಯಾ ಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಸಂಸ್ಥೆಗಳಾದವು. ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವಾಗಿ ರೂಪಿಸಿದ ನಾಲ್ವಡಿಯವರನ್ನ ವಿದ್ವಾಂಸರು, ಶಿಕ್ಷಣ ತಜ್ಞರು, ಇತಿಹಾಸಕಾರರು "ಸಾಮಾಜಿಕ ಕಾನೂನುಗಳ ಹರಿಕಾರ" ಎಂದು ಕರೆದಿದ್ದಾರೆ. ಸಾಹಿತ್ಯ, ಸಂಗೀತ, ವಾಸ್ತು ಶಿಲ್ಪಗಳ ಅಭಿವೃದ್ಧಿಗೆ ಪ್ರಾಮುಖ್ಯತೆಯನ್ನು ಕೊಟ್ಟು 1905 ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಪ್ರಾರಂಭಿಸಿದರು.

1907 ರಲ್ಲಿ 'ವಾಣೀವಿಲಾಸ ಸಾಗರ' (ಮಾರಿ ಕಣಿವೆ) ಕಟ್ಟಲ್ಪಟ್ಟಿತು. 1911 ರಲ್ಲಿ ಆರಂಭವಾದ 'ಕೃಷ್ಣರಾಜಸಾಗರ' ಭಾರತದ ಮೊಟ್ಟಮೊದಲ ಬೃಹತ್ ಜಲಾಶಯ. 1900 ರಲ್ಲಿಯೇ ಶಿವನ ಸಮುದ್ರದ ಬಳಿ ಕಾವೇರಿ ನದಿಯಿಂದ ಜಲ-ವಿದ್ಯುತ್ ಕೇಂದ್ರ ಆರಂಭವಾಯಿತು. ಇದು ಭಾರತದ ಮೊದಲ ಜಲ ವಿದ್ಯುತ್ ಕೇಂದ್ರ ಏಷ್ಯಾ ಖಂಡದಲ್ಲೇ ಮೊದಲ ಜಲ ವಿದ್ಯುತ್ ಯೋಜನೆಯನ್ನು ಪ್ರಾರಂಭಿಸಿದ ಕೀರ್ತಿ ನಾಲ್ವಡಿಯವರದು. ಇದರ ಫಲಿತವಾಗಿ 1905 ರ ಆಗಸ್ಟ್ 3 ರಂದು ಪ್ರಥಮವಾಗಿ ಬೆಂಗಳೂರಿನಲ್ಲಿ ವಿದ್ಯುತ್ ದೀಪಗಳು ಬೆಳಗಿದವು. ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಉಚಿತವಾಗಿ ಮತ್ತು ಕಡ್ಡಾಯವಾಗಿ ಆರಂಭಿಸಲಾಯಿತು. ನಾಲ್ವಡಿ ಕೃಷ್ಣರಾಜರ ಮಹತ್ತರ ಸಾಧನೆಯೆಂದರೆ ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದುದು. ದೇಶದಲ್ಲೇ ಮೊಟ್ಟ ಮೊದಲ ವಿಶ್ವವಿದ್ಯಾನಿಲಯವನ್ನು ಮೈಸೂರಿನಲ್ಲಿ ತೆರೆದು ದಾಖಲೆ ನಿರ್ಮಿಸಿದರು. ಅವರ ಕಾಲದಲ್ಲಿ ರಾಜ್ಯದ ಹಲವು ಕಡೆ 270 ಉಚಿತ ಆಸ್ಪತ್ರೆಗಳು ಕಾರ್ಯಾರಂಭ ಮಾಡಿದವು. ಬೆಂಗಳೂರಿನ ಮಿಂಟೊ ಕಣ್ಣಾಸ್ಪತ್ರೆ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿತ್ತು.

ರೈತರಿಗಾಗಿ ಜಮೀನು ಅಡಮಾನ ಬ್ಯಾಂಕುಗಳು ಆರಂಭವಾದವು. ರಾಜ್ಯದ ಹಲವು ಕಡೆ ಹೊಸ ರೈಲು ಮಾರ್ಗಗಳನ್ನು ನಿರ್ಮಾಣ ಮಾಡಲಾಯಿತು. ಆಚರಣೆಯಲ್ಲಿದ್ದ ಹಲವು ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ನಿಷೇಧಿಸಿ ಹೊಸ ಸಾಮಾಜಿಕ ಕಾನೂನುಗಳನ್ನು ಜಾರಿಗೆ ತಂದ ಕೀರ್ತಿ ಅವರಿಗೆ ಸಲ್ಲುತ್ತದೆ.

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 38 ವರ್ಷಗಳ ಕಾಲ ದಕ್ಷ ಆಡಳಿತ ನಡೆಸಿ ಏಳಿಗೆಗಾಗಿ ಪ್ರಜೆಗಳ ನೆಮ್ಮದಿ ಬದುಕಿಗಾಗಿ ತಮ್ಮ ಇಡೀ ಜೀವನವನ್ನೇ ಮುಡಿಪಾಗಿಟ್ಟರು. ಸಾಮಾಜಿಕ ಪರಿವರ್ತನೆಯ ರೂವಾರಿಯಾಗಿದ್ದ ಅವರು 1940 ರ ಆಗಸ್ಟ್ 3 ರಂದು ನಿಧನರಾದರು.

## ಇವರು ನಮ್ಮ ಸಾಹಿತಿಗಳು

# ಮಳಲಿ ವಸಂತಕುಮಾರ್

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಉತ್ತಮ ಬರಹಗಾರರಾಗಿ, ಜಾನಪದ ವಿದ್ವಾಂಸರಾಗಿ ಹಾಗೂ ಶಿಕ್ಷಕರಾಗಿ ಹೆಸರು ಮಾಡಿದವರು ಮಳಲಿ ವಸಂತಕುಮಾರ್ ಅವರು.

ಕನ್ನಡ ಕಾವ್ಯ, ಕತೆ, ನಾಟಕ, ವಿಮರ್ಶೆ, ಜಾನಪದ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಹೆಚ್ಚು ಆಸಕ್ತಿಯಿಂದ ಕಾರ್ಯನಿರ್ವಹಿಸಿದವರು ಅವರು ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಮಳಲಿಯಲ್ಲಿ 1945 ರಲ್ಲಿ ಜನಿಸಿದರು. ತಂದೆ ಪಟೇಲ್ ಚಿಕ್ಕೇಗೌಡ ಹಾಗೂ ತಾಯಿ ದೇವಮ್ಮ.



ಅವರು ಪ್ರೌಢಶಾಲೆಯವರೆಗೂ ತಂದೆಯ ಮಾರ್ಗದರ್ಶನದಲ್ಲಿ ಮಳಲಿಯಲ್ಲೇ ಶಿಕ್ಷಣ ಪಡೆದರು.

ನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ., ಪದವಿ, ಮಂಗಳೂರಿನ ಸ್ನಾತಕೋತ್ತರ ಕೇಂದ್ರದಿಂದ ಎಂ.ಎ., ಪದವಿಗಳಿಸಿದರು.

ಮದರಾಸು ವಿಶ್ವವಿದ್ಯಾಲಯದಿಂದ ಎಂ.ಫಿಲ್ ಪದವಿ ಪಡೆದರು. "ಕುವೆಂಪು ಅವರ ನಾಟಕಗಳು" ಎಂಬ ವಿಷಯದ ಮೇಲೆ ಡಾ.ಎಚ್.ತಿಪ್ಪೇರುದ್ರಸ್ವಾಮಿಯವರ ಮಾರ್ಗದರ್ಶನದಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದರು.

ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇರಿದ ಅವರು ನಂತರ ಯುವರಾಜ ಕಾಲೇಜಿನಲ್ಲಿ ಉಪ-ಪ್ರಾಧ್ಯಾಪಕರಾಗಿ, ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಗಳಾದ ಹೇಮ ಗಂಗೋತ್ರಿ ಮತ್ತು ಮಂಡ್ಯ ಸ್ನಾತಕೋತ್ತರ ಕೇಂದ್ರಗಳಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು.

ವಿದ್ಯಾರ್ಥಿದೆಸೆಯಲ್ಲಿಯೇ ಜಾನಪದ ಸಂಗ್ರಹ ಹಾಗೂ ಜಾನಪದ ಶಾಸ್ತ್ರೀಯ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದ ಅವರು ಗ್ರಾಮದೇವತೆಯ ಕುರಿತು ರಚಿಸಿದ ಮೊಟ್ಟ-ಮೊದಲಕೃತಿ "ಮಳಲಿ ಗಿಡ್ಡಮ್ಮ", "ಕೋಲು ಪದಗಳು", "ಹೃದಯಗಂಗೆ", ಯುವಮಧ್ವರ್ಯ, ಲಂಕೇಶ್ವರ, ಸ್ಥಿತ್ಯಂತರ, ರಿಕ್ತ, ಕದಂಬ, ವಿವಕ್ಷೆ ಸೇರಿದಂತೆ 40 ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಮಳಲಿ ವಸಂತಕುಮಾರ್ ಅವರಿಗೆ 1990 ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಹೊಯ್ಸಳ ಹಾಗೂ ವಿಶ್ವಮಾನವ ಪ್ರಶಸ್ತಿ, ಸಾಹಿತ್ಯ ರತ್ನ ಹಾಗೂ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ.

ಗೋಕಾಕ್ ಚಳವಳಿಯಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದ ವಸಂತಕುಮಾರ್ ಅವರು ತಮ್ಮ 76 ನೇ ವಯಸ್ಸಿನಲ್ಲಿ 2021 ರ ಮಾರ್ಚ್ 18 ರಂದು ನಿಧನರಾದರು.

### ಹುಟ್ಟುಹಬ್ಬದ ಶುಭಾಶಯಗಳು

2021ನೇ ವರ್ಷದ ಅಕ್ಟೋಬರ್-ಡಿಸೆಂಬರ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸುತ್ತಿರುವ ಬೆಸ್ಕಾಂನ ಅಧಿಕಾರಿಗಳು, ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ" ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

– ಸಂಪಾದಕೀಯ ಮಂಡಳಿ

### ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2021ನೇ ವರ್ಷದ ಅಕ್ಟೋಬರ್-ಡಿಸೆಂಬರ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು / ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.

– ಸಂಪಾದಕೀಯ ಮಂಡಳಿ

# ಕವನಗಳು



## ಅಪ್ಪ-ಅಮ್ಮ

ರೆಕ್ಕೆ ಕಟ್ಟಿದ ಅಮ್ಮನ ಕೂಸು,
ಹೆಗಲ ಮೇಲೆ ಹೊತ್ತು ಆಡಿಸಿದ ಅಪ್ಪನ ಕನಸು,
ಇಬ್ಬರ ಬಯಕೆ ಕಂಗಳ ಆಸೆಯ ಹೊಳಪು
ಏರುತ ಸಾಗಿತು ದಿಗಂತಗಳೆಡೆಗೆ ಬದುಕು.

ರೆಕ್ಕೆ ಬಲಿತಾಗ, ಬಾಳು ಕರೆದಾಗ,
ಬೆಳಕ ಬೀರುವ ಆಗಸದೆಡೆಗೆ,
ಚಿಮ್ಮುತ ಹಾರಿ ಹೊಸ ದಾರಿಯ ಕಾಣುತ,
ಮರೆತೆ ಬಿಟ್ಟೆವು ಕಾಲದ ಸೆರಗಲಿ,
ಮಾಸಿದ ಅಪ್ಪ ಅಮ್ಮನ ಮುಪ್ಪು.

ಅಪ್ಪನ ತಲೆಯ ನೆರೆದ ಕೂದಲು,
ಅಮ್ಮನ ಸುಕ್ಕಾದ ಕೈಗಳು,
ಅರಿವಿಗೆ ಬರಲೇ ಇಲ್ಲ ಎಷ್ಟೋ ದಿನಗಳು,
ಎದೆಯಲ್ಲಿ ಹೊತ್ತು ಅರಸಿದವರ,
ಮರೆತು ಸಾಗಿದವು ಅಂತೂ ಎಲ್ಲವು.

ಬಾಳ ಮುಸ್ಸಂಜೆಯಲಿ ದಣಿದು ಕೂತರೆ
ಅಪ್ಪ ಅಮ್ಮನ ಕೈ ನೇವರಿಸಲು ಸಿಗಲಿಲ್ಲ
ಅವರೊಂದಿಗಿನ ನೆನಪಿನ ಬುತ್ತಿ
ಕಾಲ ಮಾಸುವ ತನಕ ತೀರಲಿಲ್ಲ.

**-ಕವಿತಾ ಕೆ.**
ಸ.ಕಾ.ಇಂ ಎಸ್೨ ಉ.ವಿ



## ನಿಂನಗು

ಬರೆಯಲೆಂದು ಕವಿತೆಯೊಂದ ಕುಳಿತೆನೊಂದು ವಿಷಯದಿ
ಒಡನೆ ಮೂಡಿಬಂತು ಮನದಿ ಜೀವವಿರುವ ಕಾವ್ಯವು
ಅಂಬರವ ಚುಂಬಿಸಿ ಬರುವ ಬೆಳ್ಳಿ ಮೋಡದ ತೆರದಿ
ನೆನಪಿನಂಗಳದಲಿ ತೇಲಿಬಂತು ನಿನ್ನಯ ಹೂನಗೆ
ಆಗಾಗ ಯೋಚಿಸುವೆ ಈ ನಗು, ನಗುವಲ್ಲವೆಂದು
ಬ್ರಹ್ಮಾಂಡವನ್ನೇ ಅರಳಿಸುವ ಚಂದ್ರಕಾಂತಿಯೆಂದು
ಈ ನಗು, ಯಾವುದರ ಸಮನಾಗಿ ತೂಗಿಸಲು
ಈ ಪ್ರಪಂಚದಲ್ಲಿ ಯಾವ ವಸ್ತುವೂ ಇಲ್ಲವೋ
ಅಂತಹ ನಗುವಿನ ಒಡತಿಯಾಗಿ ಕಣ್ಣುಂದೆ ಸುಳಿದಿರುವೆ
ಬಳಲಿ ಬೆಂಡಾದ ಕಂಗಳಿಗೆ ಆಸೆಯ ಲೇಪ ಬಳಿದಿರುವೆ
ನೀನೊಮ್ಮೆ ನಕ್ಕಾಗ ಮಲ್ಲಿಗೆ ದಳಗಳನ್ನು ಗಾಳಿಗೊಡ್ಡಿ
ಪರಿಮಳ ಸೂಸುವಂತೆ ಸಂತಸವಾಗುವುದು
ನಿನ್ನ ನಗುವಿನ ಶುಭ್ರತೆ ಚರಿತ್ರೆಯ ಸರೋವರಕ್ಕೂ ಮಿಗಿಲು
ದಾಳಿಂಬೆ ಬೀಜದ ದಂತಗಳಲ್ಲಿ ಅರಳುವ ನಿನ್ನ ಮುಗುಳ್ನಗೆ
ನೋಡಲು ಮುಸ್ಸಂಜೆಯ ಮುಗಿಲಿಗೂ ಮಿಗಲು
ನಿನ್ನ ನಗುವ ನವಕಾಂತಿಯು ತಿಂಗಳ ತಂಪಿಗೂ ಮಿಗಿಲು
ನಿನ್ನ ನಗು ಕಂಡಾಗ ನನ್ನ ಮನ ಮಯೂರಿಯು
ಮೋಡ ಕಂಡ ಗಂಡುನವಿಲಿನ ತೆರದಿ ಕುಣಿಯತೊಡಗಿತ್ತು
ಸಾಲುಗಟ್ಟಿದ ಮುತ್ತುಗಳ ಪ್ರಭೆಯಿಂದ ಮಿಂಚುತಿಹ ನಗುವೂ
ಈ ನಗುವನ್ನು ಕಲ್ಪಿಸುತ ಕಣ್ಮುಚ್ಚಿ ಮಲಗಿದೆನು
ಕನಸು ಕಂಗಳಲ್ಲಿ ಕಿಲಕಿಲ ನಗುತ್ತಾ ನೀ ಬಂದೇ ಬರುವಿಯೆಂದು

**-ಬಿ.ವೆಂಕಟೇಶ,** ಉಪ ಪ್ರಧಾನ ವ್ಯವಸ್ಥಾಪಕರು (ಐ.ಟಿ)



## ಸಹಾಯವಾಣಿ

ಪತರಗುಟ್ಟುವ ಚಳಿಗೆ ಬೆಚ್ಚನೆಯ ಕಾಫಿ ಚೆನ್ನ,
ಕರೆಂಟು ಇಲ್ಲದ ಸಮಯದಲ್ಲಿ ನೆನಪಿಸಿಕೊಳ್ಳಿ
ನಮ್ಮ ಸಹಾಯವಾಣಿಯನ್ನ........

ಡಯಲ್ ಮಾಡಿ 1912 ಸಂಖ್ಯೆಯನ್ನ,
ನಾವು ಬೆಳಗಿಸುವೆವು ನಿಮ್ಮ ಬಾಳಿನ ಬೆಳಕನ್ನ....



## ಸ್ನೇಹಿತರು

ಸ್ನೇಹಿತರೊಂದಿಗಿರದ ದಿನವಿಲ್ಲ,
ಸ್ನೇಹಿತರೊಂದಿಗೆ ಆಡದ ಮಾತುಗಳಿಲ್ಲ,
ಹೋಗದ ಜಾಗಗಳಿಲ್ಲ, ಮಾಡದ ಪಾರ್ಟಿಗಳಿಲ್ಲ,
ನೋವಿಗೆ ಸ್ಥಳವಿಲ್ಲ, ನಲಿವಿಗೆ ಕೊರತೆಯಿಲ್ಲ,
ಸ್ನೇಹಿತರಿಲ್ಲದೆ ಬದುಕು ಪೂರ್ತಿಯಾಗೋದಿಲ್ಲ....

**-ಸಂತೋಷ್‌ಕುಮಾರ್**
ಟೀಮ್ ಲೀಡರ್, ಬೆಸ್ಕಾಂ ಸಹಾಯವಾಣಿ



## ಜೀರಿಗೆ

ಇದೊಂದು ಮಸಾಲೆ ಪದಾರ್ಥದ ಕಾಳು. ರುಚಿ ಮತ್ತು ಪರಿಮಳಕ್ಕಾಗಿ ಅಡಿಗೆಯಲ್ಲಿ ಉಪಯೋಗಿಸುತ್ತಾರೆ.

ಒಂದು ಚಮಚ ಜೀರಿಗೆ ಪುಡಿಯನ್ನು ಎರಡು ಕಪ್ಪು ನೀರಿನಲ್ಲಿ ಕಷಾಯ ಮಾಡಿ ಒಂದು ಚಮಚ ಬೆಲ್ಲ ಅಥವಾ ಸಕ್ಕರೆ ಬೆರೆಸಿ ಮೂರು ಹೊತ್ತು ಕುಡಿಯಬೇಕು. ಇದರಿಂದ ಜಠರ ದೋಷಗಳು ನಿವಾರಣೆಯಾಗುವುವು.



ಜೀರಿಗೆ, ಮೆಣಸು, ಒಣಶುಂಠಿ, ಹಿಪ್ಪಲಿ, ಸೈಂಧವ ಲವಣಗಳನ್ನು ಸಮಪ್ರಮಾಣದಲ್ಲಿ ತೆಗೆದುಕೊಂಡು ಚೂರ್ಣ ಮಾಡಿ ಸ್ವಲ್ಪ ಹುರಿದ ಇಂಗು ಬೆರೆಸಿ ನೀರು ಇಲ್ಲವೆ ಮಜ್ಜಿಗೆಯೊಂದಿಗೆ ಸೇವಿಸಿದರೆ ಆಹಾರ ಜೀರ್ಣವಾಗುವುದರ ಜತೆಗೆ ಜಠರದ ದೋಷಗಳು ನಿವಾರಣೆಯಾಗುತ್ತವೆ.

ಜೀರಿಗೆ ಕಷಾಯವನ್ನು ಆಗಾಗ ಗುಟುಕರಿಸುತ್ತಿದ್ದರೆ ಒಣಕೆಮ್ಮು, ಪಿತ್ತ ಹಾಗೂ ವಾಂತಿ ನಿವಾರಣೆಗೆ ಸಹಾಯವಾಗುತ್ತದೆ.

ಗರ್ಭಿಣಿಯರಿಗೆ ಸುಖ ಪ್ರಸವ ಹಾಗೂ ಹೆರಿಗೆ ನಂತರ ಎದೆಹಾಲು ವೃದ್ಧಿಗೆ ಜೀರಿಗೆ ಕಷಾಯಕ್ಕೆ ಸ್ವಲ್ಪಹಾಲು ಮತ್ತು ಜೇನು ಬೆರೆಸಿ ಊಟದ ನಂತರ ಕುಡಿಸುತ್ತಾರೆ.

ಆಯುರ್ವೇದದಲ್ಲಿ ಜೀರಿಗೆಯನ್ನು ಹಲವು ರೋಗಗಳ ಉಪಶಮನಕ್ಕಾಗಿ ಬಳಸುತ್ತಾರೆ.

## ಬೀಟ್‌ರೂಟ್

ಕೆಂಪು ಗಡ್ಡೆಯಾದ ಇದನ್ನು ತರಕಾರಿಯಾಗಿ ಸಾಕಷ್ಟು ಬಳಸುತ್ತಾರೆ.

ಆಹಾರದಲ್ಲಿ ಬೀಟ್‌ರೂಟ್ ಬಳಕೆ ರಕ್ತದ ಒತ್ತಡ, ಸಕ್ಕರೆ ರೋಗ ಹಾಗೂ ರಕ್ತದ ದೋಷ ನಿವಾರಣೆಗೆ ಸಹಕಾರಿಯಾಗುತ್ತದೆ.



ಬೀಟ್‌ರೂಟ್‌ನಲ್ಲಿ ಸಹಜವಾಗಿ ಸಕ್ಕರೆ ಅಂಶ ಹೇರಳವಾಗಿದೆ. ಇದರಲ್ಲಿ ಹಲವು ಜೀವಸತ್ವಗಳು ಇವೆ. ಇದು ಸುಲಭವಾಗಿ ಮತ್ತು ಬಹುಬೇಗನೆ ಜೀರ್ಣವಾಗುವುದರಿಂದ ಮೂತ್ರ ಕೋಶವನ್ನು ಶುದ್ಧಗೊಳಿಸಿ, ಆಮ್ಲ ಪಿತ್ತಗಳನ್ನು ನಿವಾರಿಸುತ್ತದೆ.

ರಕ್ತದ ಕೊರತೆ ನಿವಾರಣೆ ಹಾಗೂ ಕೆಂಪು ರಕ್ತದ ಕಣಗಳನ್ನು ವೃದ್ಧಿಸಲು ನೆರವಾಗುತ್ತದೆ.


ರಾತ್ರಿ ಮಲಗುವುದಕ್ಕೆ ಮುಂಚೆ ಬೀಟ್‌ರೂಟ್ ರಸವನ್ನು ಅರ್ಧ ಲೋಟದಷ್ಟು ಕುಡಿಯುವುದರಿಂದ ಮಲಬದ್ಧತೆ ಹಾಗೂ ಮೂಲವ್ಯಾಧಿ ನಿವಾರಣೆಗೂ ಇದು ಸಹಕಾರಿಯಾಗಲಿದೆ.

ಅಲ್ಲದೆ ಇದನ್ನು ಸಣ್ಣ ತುಂಡುಗಳಾಗಿ ಕತ್ತರಿಸಿ ಉಪ್ಪು, ಕೊತ್ತಂಬರಿ ಸೊಪ್ಪು, ನೀರುಳ್ಳಿಗಳ ಜತೆ ಸಲಡ್‌ನಂತೆಯೂ ಬಳಸಬಹುದು.

ಕನ್ನಡ ಬೆಳಕು

# ಅಳಿವು ಉಳಿವು ಪರಸ್ಪರ ಪೂರಕ

**ಹೊಳಪುಹೊಳಪಿನ ನಡುವೆ ಬಿಡುವಿನಿತು ರತ್ನದಲಿ |**
**ಬೆಳಕು ಬೆಳಕಿನ ನಡುವೆ ಅನಿತಿನಿತು ನೆರಳು ||**
**ಬೆಳಸು ಬೆಳಸಿನ ಸಾಲು ನಡುವೆ ಬದಿ ಗದ್ದೆಯಲಿ |**
**ಉಳಿವಿಗಳಿವಿನ ನೆರೆಯೊ–ಮಂಕುತಿಮ್ಮ ||**



'ಆಭರಣಗಳಲ್ಲಿ ಹೊಳಪಿನ ಬಂಗಾರದ ಮಧ್ಯೆ ಮಧ್ಯೆ ರತ್ನವನ್ನು ಕೂರಿಸಿರುತ್ತಾರೆ. ಬೆಳಕಿನ ಮಧ್ಯೆ ಅಲ್ಪ ಸ್ವಲ್ಪ ನೆರಳು ಇರುತ್ತದೆ. ಹುಲುಸಾಗಿ ಬೆಳೆದ ಗದ್ದೆಯ ನಡುವೆ ಬದುವಿರುತ್ತದೆ. ಹಾಗೆಯೇ ಉಳಿವಿಗೆ ಅಳಿವಿನ ನೆರೆ ಕವಿಯುತ್ತದೆ' ಎನ್ನುತ್ತದೆ ಈ ಕಗ್ಗ.

ಮೋಡ ಕವಿದು ಮಳೆ ಸುರಿಯುವ ಪ್ರಕ್ರಿಯೆಗಳ ನಡುವೆ, ಮಳೆ ಇರದ ಹೊತ್ತಲ್ಲಿ ಹರಡಿಕೊಳ್ಳುವ ಹೊಂಬಿಸಿಸಲು ಅಪ್ಯಾಯಮಾನ. ಸಮುದ್ರದಲ್ಲಿ ಮೇಲಿಂದ ಮೇಲೆ ಚಿಮ್ಮುವ ಅಲೆಗಳ ನಡುವಿನ ಪುಟ್ಟ ವಿರಾಮ ಆನಂದದಾಯಕ. ಹಾಡಿನ ಸಾಲುಗಳ ನಡುವೆ ಮೌನವು ಭಾವಸ್ಪಂದನಕ್ಕೆ ಅಗತ್ಯ.

ಸುರಿವ ಮಳೆ ಹನಿಗಳು ಭೂಮಿಯಾಳವನ್ನು ಸೇರಲು ಹೊಂಬಿಸಿಲಿನ ವಿರಾಮ ಬೇಕು. ಒಂದೇ ಸಮನೆ ಮಳೆ ಸುರಿದರೆ ಜನ ಜೀವನ ದುಸ್ತರವಾಗುವುದು ಖಂಡಿತ. ಅಲೆಗಳ ಏರಿಳಿತದ ನಡುವೆ ಅಂತರವಿರುವುದರಿಂದಲೇ ಅವುಗಳಿಗೆ ಸ್ಪಷ್ಟತೆ. ಪದಸಾಲಿನ ನಡುವಿನ ನಿಲುಗಡೆಯಿಂದಲೇ ಭಾವಪೂರ್ಣ ಅಭಿವ್ಯಕ್ತಿ ಸಾಧ್ಯವಾಗುತ್ತದೆ. ಹೀಗೆ ಇರದಿರುವ ಸ್ಥಿತಿಯು ಇರುವುದಕ್ಕೆ ಪೂರಕವಾಗಿರುತ್ತದೆ.

ರತ್ನಗಳನ್ನು ಕೂಡಿಸಿ ಮಾಡಿದ ಬಂಗಾರದ ಒಡವೆಯಲ್ಲಿ ಹರಳುಗಳ ನಡುವೆ ಬಂಗಾರವಿರುತ್ತದೆ. ಇದು ಒಡವೆಯ ಚೆಲುವನ್ನು ಹೆಚ್ಚಿಸುವುದರೊಂದಿಗೆ ಹರಳು ಬಿದ್ದುಹೋಗದಂತೆ ಕಾಪಾಡುತ್ತದೆ. ದೇದೀಪ್ಯಮಾನವಾಗಿ ಬೆಳಗುವ ದೀಪದ ಬುಡದಲ್ಲಿ ಕತ್ತಲಿರುವುದರಿಂದ ಬೆಳಕು ಇನ್ನಷ್ಟು ಪ್ರಜ್ವಲಿಸುತ್ತದೆ. ಇರುಳ ಹಿನ್ನೆಲೆಯಿದ್ದಾಗಲೇ ಬೆಳಕಿನ ಮಹತ್ವ ತಿಳಿಯುತ್ತದೆ. ಸಾಲು ದೀಪಗಳಿದ್ದರೂ ನೆರಳ ಕತ್ತಲು ಇಲ್ಲವಾದರೆ ಆ ಬೆಳಕು ಬೇಕೆನಿಸದು. ಹೀಗೆಯೇ ಬೆಳೆಯ ನಡುವೆ ಅಂತರವಿದ್ದಾಗ, ಗದ್ದೆಗಳ ನಡುವಿನಲ್ಲಿ ಬದುವಿದ್ದಾಗ ಬೆಳೆ ಹುಲುಸಾಗಿ ಬೆಳೆಯಲು ಸಾಧ್ಯ. ಈ ರೀತಿ ಒಂದು ಇನ್ನೊಂದಕ್ಕೆ ಪ್ರೋತ್ಸಾಹಕವಾಗಿದೆ, ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತದೆ.

ಇದೇ ರೀತಿ ಬದುಕಿನಲ್ಲಿ ನಲಿವಷ್ಟೇ ಇದ್ದರೆ, ಗೆಲುವನ್ನೇ ಕಾಣುತ್ತಿದ್ದರೆ ಯಾವ ಸ್ವಾರಸ್ಯವೂ ಇರದು, ನಲಿವಿನ ನಡುವೆ ಅಂತರ್ಮುಖಿಯಾಗಿಸುವ ನೋವು, ಹಮ್ಮುಡಗಿಸುವ ಸೋಲು ಜೀವದ ಪ್ರಗತಿಗೆ ಜೀವನದ ಮೌಲ್ಯವು ಅರ್ಥವಾಗಲು ಸುಖ–ದುಃಖಗಳೆರಡೂ ಬೇಕು, ಹಸಿದವನಿಗೆ ಮಾತ್ರ ಅನ್ನದ ಬೆಲೆ ತಿಳಿದಿರುತ್ತದೆ. ಕಷ್ಟ–ನಷ್ಟಗಳಿಗೆ ಒಳಗಾದವನಿಗೆ ಮಾತ್ರ ಇತರರ ಬವಣೆಗಳು ಅರ್ಥವಾಗುತ್ತದೆ. ನೋವನ್ನು ಅನುಭವಿಸದ, ವಿಫಲತೆಯನ್ನು ಎದುರಿಸದ ವ್ಯಕ್ತಿ ಜೀವನದಲ್ಲಿ ಯಶಸ್ಸನ್ನು ಅನುಭವಿಸಲಾರ.

ಸೃಷ್ಟಿಯಲ್ಲೂ ಈ ಅಸಮತೆಯನ್ನು ಕಾಣುತ್ತೇವೆ. ಕಹಿ–ಸಿಹಿ, ಬಯಲು–ಬೆಟ್ಟ, ತಾಪ–ತಂಪು ಮುಂತಾದ ಗುಣವಿರೋಧಗಳು ಇದ್ದೇ ಇವೆ. ಆದರೆ ಈ ವಿರೋಧವೇ ಇನ್ನೊಂದರ ಮಹತ್ವವನ್ನು ಎತ್ತಿಹಿಡಿಯುತ್ತದೆ. ಅಂತೆಯೇ ಅಳಿವು ಉಳಿವುಗಳು ವಿರುದ್ಧ ಪದಗಳಲ್ಲ. ಬೀಜವು ತನ್ನನ್ನು ತಾನು ಇಲ್ಲವಾಗಿಸಿಕೊಂಡು ಗಿಡವಾಗಿ ಬೆಳೆಯುತ್ತದೆ. ಹೊಸ ಹುಟ್ಟು ಬಾಳ ಬದುಕಬೇಕಾದರೆ, ಬದುಕಿದ್ದ ಜೀವಗಳು ಸಾವಿನ ಬಾಗಿಲಿನಾಚೆ ಸರಿಯಬೇಕು. ಕಾಲ ಪ್ರವಾಹದಲ್ಲಿ ಎಲ್ಲವೂ ಕೊಚ್ಚಿಕೊಂಡು ಹೋಗುತ್ತದೆ. ಹಳೆಯ ನೀರು ಸರಿದರಷ್ಟೇ ಹೊಸ ನೀರಿಗೆ ಅವಕಾಶ. ಆದುದರಿಂದ ಜೀವನದಲ್ಲಿ ಬದಲಾವಣೆ ಸಹಜ ಮತ್ತು ಅನಿವಾರ್ಯ.

ಈ ರೀತಿ ವೈರುದ್ಧ್ಯಗಳು, ಅಸಮತೆ ಇರುವುದರಿಂದಲೇ ಭೂಮಿಯ ಬದುಕು ವೈವಿಧ್ಯವಾಗಿದೆ. ನಾವೀನ್ಯತೆ, ನೈಜತೆ ಉಳಿಸಿಕೊಂಡಿದೆ. ಮನುಷ್ಯನ ಮನಸ್ಸು ಕೂಡ ಈ ಸತ್ಯವನ್ನು ಅರ್ಥೈಸಿಕೊಳ್ಳಬೇಕು. ಕೊರತೆಗಳಿಗಾಗಿ ಕೊರಗದೆ, ಉತ್ಸಾಹದಿಂದ ಮುನ್ನಡೆದರಷ್ಟೇ ಸಂತೃಪ್ತಿ, ಸಂತೋಷ ಜತೆಗೂಡುತ್ತದೆ.


ಬೆವಿಕಂ
BESCOM

# ಕರ್ನಾಟಕ ಇ-ಮೊಬಿಲಿಟಿ ಕಾರ್ಯಾಗಾರ















## ಸಂಪಾದಕ ಮಂಡಳ

| | |
|---|---|
| **ಶ್ರೀ ಪಿ.ರಾಜೇಂದ್ರ ಚೋಳನ್,** ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ದರ್ಶನ್ ಜೆ.,** ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ಹೆಚ್. ಶ್ರೀರಾಮೇಗೌಡ,** ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ಸೋಮಶೇಖರ್ ಬಿ.ಆರ್.** ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) | ಸಂಪಾದಕರು |
| **ಶ್ರೀ ಬಿ.ವಿ. ನಾಗರಾಜ್,** ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | ಸದಸ್ಯರು |
| **ಶ್ರೀ ಎಸ್.ಆರ್.ರಾಜನಾಯಕ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ರಾಮಚಂದ್ರರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ ಎಸ್ಸಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಬಿ.ಮನೋಜ್‌ಕುಮಾರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇಂ. ಸಂಘ | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ / ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ


ವಿಳಾಸ : **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) ನಿಗಮ ಕಾರ್ಯಾಲಯ, ಬೆ.ವಿ.ಕಂಪನಿ, ಕೆ.ಆರ್.ವೃತ್ತ, ಬೆಂಗಳೂರು-560 001.**

ಇ-ಮೇಲ್ ವಿಳಾಸ : gmcr@bescom.co.in


ಬೆವಿಕಂ BESCOM

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ 1912**

**ಇ-ಮೇಲ್ ವಿಳಾಸ :** helplinebescom@gmail.com **ವೆಬ್‌ಸೈಟ್ :** www.bescom.org